DFA/ 4344

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 552

ಸದಸ್ಯರ ಹೆಸರು : ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 16-09-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಂಚಾರ ಮಾಡುವ ದೊಡ್ಡ ವಾಹನಗಳಿಗೆ ಅಳವಡಿಸುತ್ತಿರುವ ಹೆಡ್‌ಲೈಟ್‌ಗಳಿಂದ ಅಪಘಾತಗಳು ಆಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; | ವಾಹನಗಳ ಅಪಘಾತಗಳು ಹಲವಾರು ಕಾರಣ ಗಳಿಂದ ಸಂಭವಿಸುತ್ತವೆಯಾದ್ದರಿಂದ ಅತೀ ಪ್ರಕಾಶವಿರುವ ಲೈಟ್ ಗಳಿಂದ ಮಾತ್ರ ವಾಹನಗಳ ಅಪಘಾತಗಳು ಹೆಚ್ಚುತ್ತಿವೆ ಎಂಬುದು ನಿರ್ಧಿಷ್ಟವಾಗಿ ಗಮನಕ್ಕೆ ಬಂದಿರುವುದಿಲ್ಲ.<br><br>ವಾಹನಗಳ ಚಾಲಕರುಗಳಿಗೆ ವಿರುದ್ಧ ದಿಕ್ಕಿನಲ್ಲಿ ಬರುವ ವಾಹನಗಳ ಚಾಲಕರುಗಳಿಗೆ ತೊಂದರೆಯಾಗದಂತೆ ಹೈಬೀಮ್ ಲೈಟ್‌ಗಳನ್ನು ಹೆಚ್ಚಾಗಿ ಉಪಯೋಗಿಸದಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಸುರಕ್ಷತೆಯ ಸಲುವಾಗಿ ಅರಿವು ಮೂಡಿಸಲಾಗುತ್ತಿದೆ.<br><br>ನಿಯಮ ಉಲ್ಲಂಘಿಸಿದ ವಾಹನ ಚಾಲಕ/ಸವಾರರ ವಿರುದ್ಧ ಮೋಟಾರ್ ವಾಹನ ಕಾಯ್ದೆ ಕಲಂ 177ರಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. |
| ಆ. | ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿದೆಯೇ; ಇದ್ದಲ್ಲಿ ಅದರ ಮಾಹಿತಿಯನ್ನು ನೀಡುವುದು ಇಲ್ಲವಾದಲ್ಲಿ, ಇಂತಹ ವಾಹನಗಳ ವಿರುದ್ಧ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) | ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿರುವುದಿಲ್ಲ.<br><br>ವಾಹನಗಳ ತಪಾಸಣೆ ಸಮಯದಲ್ಲಿ ಮತ್ತು ಪ್ರವರ್ತನ ಸಮಯದಲ್ಲಿ ಅತೀ ಪ್ರಕಾಶವಿರುವ ಹೆಡ್ ಲೈಟ್ ಅಳವಡಿಕೆಯಾದ ವಾಹನಗಳಿಗೆ ಪ್ರತಿ ವಾಹನಕ್ಕೆ ರೂ.500/-ಗಳ ದಂಡ ವಿಧಿಸಲಾಗಿದೆ. |
| ಇ. | ಹಿಂದೆ ಭಾರಿ ವಾಹನಗಳಲ್ಲಿ ದೀಪಗಳ ಪ್ರಖರತೆಯನ್ನು ತಗ್ಗಿಸಲು ವಾಹನಗಳ ಹೆಡ್ ಲೈಟ್ ನ ಮೇಲ್ಭಾಗಕ್ಕೆ ಕಪ್ಪು ಬಣ್ಣವನ್ನು ಬಳಿಯುತ್ತಿದ್ದಂತೆ ಮಾಡಲು ಸರ್ಕಾರದ ಚಿಂತನೆಗಳೇನು; (ವಿವರ ನೀಡುವುದು) | ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 105ರಡಿ ದೊಡ್ಡ ವಾಹನಗಳ ದೀಪಗಳಿಗೆ ಪ್ರಖರತೆಯನ್ನು ತಗ್ಗಿಸಲು ಕಪ್ಪು ಬಣ್ಣವನ್ನು ಹಚ್ಚುವ ಬಗ್ಗೆ ನಮೂದು ಇರುವುದಿಲ್ಲ.<br><br>ಆದಾಗ್ಯೂ ಇತರೆ ವಾಹನಗಳಿಗೆ ದೀಪಗಳ ಪ್ರಖರತೆಯಿಂದ ಸಂಭವನೀಯ ಅಪಘಾತಗಳನ್ನು ತಪ್ಪಿಸಲು ಈ ಹಿಂದೆ ಅಂತಹ ವ್ಯವಸ್ಥೆಯನ್ನು ಹೊಂದಲಾಗಿತ್ತು. |
| ಈ | ಪ್ರಕರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ. ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಮತ್ತು ಅಪಘಾತಗಳು ಆಗುತ್ತಿರುವುದು ಸರ್ಕಾರದ | ಅತೀ ಪ್ರಕಾಶವಿರುವ ಲೈಟ್ ಗಳಿಂದ ಮಾತ್ರ ವಾಹನಗಳ ಅಪಘಾತಗಳು ಹೆಚ್ಚುತ್ತಿವೆ ಎಂಬುದು ನಿರ್ಧಿಷ್ಟವಾಗಿ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ, ಕರ್ನಾಟಕ ಮೋಟಾರು ವಾಹನಗಳ ನಿಯಮ 215ರ ಪ್ರಕಾರ, ಇತರೆ ವಾಹನ ಚಾಲಕರಿಗೆ ಅಪಾಯಕರ ವಾಗುವ ರೀತಿಯಲ್ಲಿ ಅತಿ ಪ್ರಕಾಶಮಾನ ಬೆಳಕು ಬೀರುವ ದೀಪಗಳನ್ನು ಅಳವಡಿಸಿ |



Generated from eOffice by B SREERAMULU, TD-MIN(BS), TRANSPORT MINISTER, Trans on 15/09/2022 01:48 PM

<table>
<tr>
<td></td>
<td>ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕಠಿಣ ಕ್ರಮಗಳೇನು ? (ವಿವರ ನೀಡುವುದು)</td>
<td>ಕೊಂಡಿರುವ ಬಗ್ಗೆ ನಗರದಲ್ಲಿ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು ಗೆಜೆಟ್ ಅಧಿಸೂಚನೆ ಹೊರಡಿಸುವುದರ ಮೂಲಕ ಇಂತಹ ದೀಪಗಳ ಬಳಕೆಯನ್ನು ನಿರ್ಬಂಧಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ. ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ.<br><br>ವಾಹನಗಳಲ್ಲಿ ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ ದೀಪಗಳನ್ನು ಉಪಯೋಗಿಸುತ್ತಿರುವುದರಿಂದ ವಿರುದ್ಧ ದಿಕ್ಕಿನಲ್ಲಿ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗುವ ಮತ್ತು ಅಪಘಾತಗಳು ಸಂಭವಿಸಬಹುದಾದ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಸುರಕ್ಷತೆಯ ಸಲುವಾಗಿ ವಾಹನಗಳಲ್ಲಿ ಎಲ್.ಇ.ಡಿ. ದೀಪಗಳನ್ನು ಉಪಯೋಗಿಸದಂತೆ ಅರಿವು ಮೂಡಿಸಲಾಗುತ್ತಿದೆ.<br><br>ಎಲ್.ಇ.ಡಿ ದೀಪಗಳನ್ನು ಉಪಯೋಗಿಸಿ ನಿಯಮ ಉಲ್ಲಂಘಿಸಿದ ವಾಹನ ಚಾಲಕ / ಸವಾರರ ವಿರುದ್ಧ ಮೋಟಾರ್ ವಾಹನ ಕಾಯ್ದೆ ಕಲಂ 177ರಡಿಯಲ್ಲಿ ಪೊಲೀಸ್ ಇಲಾಖೆಯಿಂದ ಈ ಕೆಳಕಂಡ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.<br><br>
<table>
<tr><th>ಕ್ರ ಸಂ.</th><th>ವರ್ಷ</th><th>ಎಲ್.ಇ.ಡಿ. ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳ ವಿರುದ್ಧ ದಾಖಲಿಸಿದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2019</td><td>7414</td></tr>
<tr><td>2</td><td>2020</td><td>2312</td></tr>
<tr><td>3</td><td>2021</td><td>1492</td></tr>
<tr><td>4</td><td>2022 (Up to Aug)</td><td>703</td></tr>
</table>
</td>
</tr>
</table>

ಟಿಡಿ 88 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 15/09/2022 01:48 PM